**ದಿನಾಂಕಃ 16.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ 1ನೇ ಪ್ರತಿ ವಾದಿ ಪರ ವಕೀಲರಿಂದಃ**

4. ನನ್ನ ತಾಯಿಯವರ ತಂದೆಯಾದ ವೀರೇಗೌಡರ ಹೆಸರಿನಲ್ಲಿ ಎಷ್ಟು ಸರ್ವೆ ನಂಬರ್ ಗಳ ಆಸ್ತಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಒಟ್ಟು ಎಷ್ಟು ವಿಸ್ತೀರ್ಣದ ಆಸ್ತಿ ಇತ್ತು ಎಂಬುದಾಗಿ ಗೊತ್ತಿಲ್ಲ. ನನ್ನ ತಾಯಿಗೆ ಒಟ್ಟು 3 ಎಕರೆ ಹಾಗೂ ಹೆಚ್ಚು ಕಡಿಮೆ 1 ಗುಂಟೆ ಆಸ್ತಿ ಬಂದಿರುತ್ತದೆ. ನಾನು ದಾವೆಯಲ್ಲಿ ಹೇಳಿರುವಂತೆ 1989 ರ ಪಾರಿಕತ್ ಬಗ್ಗೆ ಓದಿ ತಿಳಿದುಕೊಂಡಿರುತ್ತೇನೆ. ಸದರಿ ಪಾರಿಕತ್ ಪ್ರಕಾರ ಸರ್ವೆ ನಂ.112/3 ರಲ್ಲಿ 3 ಎಕರೆಯಲ್ಲಿ 1ಗುಂಟೆ ಕಡಿಮೆ ಇರುವ ಜಾಗವನ್ನು ನನ್ನ ತಾಯಿಗೆ ಕೊಟ್ಟಿರುತ್ತಾರೆ. ಸಾಕ್ಷಿಯು ಮುಂದುವರಿದು ರಜದ ಲೆಕ್ಕದಲ್ಲಿ ಅವರಿಗೆ ಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ನಮಗೆ 3 ಎಕರೆಯಲ್ಲಿ 1 ಗುಂಟೆ ಕಡಿಮೆ ಇರುವಷ್ಟು ಜಾಗದ ಸಂಬಂಧ ದಾಖಲಾತಿ ಕಳೆದುಹೋಗಿರುತ್ತದೆ ಆದಕಾರಣ ಅವರಿಗೆ ಬಂದಿರುವ ದಾಖಲಾತಿಯನ್ನು ಕೊಟ್ಟಿರುತ್ತೇನೆ. ಪಾರಿಕತ್ ಗೆ ಯಾರು ಯಾರು ಸಹಿ ಮಾಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ.

5. ವೀರೇಗೌಡರಿಗೆ ಒಟ್ಟು 12 ಎಕರೆ 38 ಮುಕ್ಕಾಲು ಗುಂಟೆ ಜಾಗ ಇತ್ತು ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನನ್ನ ತಾಯಿ ಚಿಕ್ಕೀರಮ್ಮ ರವರ ಹೆಸರಿನಲ್ಲಿ ಖಾತೆಯು 1986-88 ರಲ್ಲಿ ಆಗಿರಬಹುದು ಎಂದು ಸಾಕ್ಷಿ ನುಡಿಯುತ್ತಾರೆ. ನಾನು ಸದರಿ ಎಂ ಆರ್ ದಾಖಲಾತಿಯನ್ನು ಹಾಜರು ಪಡಿಸಿದ್ದು ಅದರಲ್ಲಿ ಯಾವ ಯಾವ ಸರ್ವೆ ನಂಬರ್ ನಲ್ಲಿ ಎಷ್ಟು ವಿಸ್ತೀರ್ಣ ಎಂದು ನೋಡಿರುತ್ತೇನೆ ಆದರೆ ಈಗ ನೆನಪಿಲ್ಲ ಎಂದು ನುಡಿಯುತ್ತಾರೆ. ಮೊದಲಿಗೆ ನನ್ನ ತಾಯಿಯ ಹೆಸರಿನಲ್ಲಿ ಖಾತೆಯಾಗಿದ್ದು ನಂತರ 1ನೇ ಪ್ರತಿವಾದಿಯ ಹೆಸರಿಗೆ ಖಾತೆಯಾಗಿರುತ್ತದೆಂದರೆ ಸಾಕ್ಷಿಗೊತ್ತಿಲ್ಲ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆಯು 1984-85 ರಲ್ಲೇ ಆಗಿತ್ತು ಎಂದರೆ ಸಾಕ್ಷಿಯು ಅದು ಯಾವಾಗ ಆಯಿತು ಎಂದು ಗೊತ್ತಿಲ್ಲ ಇತ್ತೀಚೆಗೆ ಅಷ್ಟೇ ಗೊತ್ತಾಯಿತು ಎಂದು ನುಡಿಯುತ್ತಾರೆ. ನನ್ನ ತಾಯಿ ತೀರಿಕೊಂಡು 15-20 ವರ್ಷಗಳಾಗಿರುತ್ತವೆ. ನನ್ನ ತಾಯಿ ಹೆಸರಿಗೆ ಆದ ಎಂ ಆರ್ ಸಂಖ್ಯೆ 5/1984-85 ರಂತೆ ಖಾತೆಯಾಗಿದ್ದು ಅದರ ಪ್ರಕಾರ ಸರ್ವೆ

ನಂ.112/3 ರಲ್ಲಿ ಖಾತೆಯಂತೆ ನನ್ನ ತಾಯಿ ಸದರಿ ದಾವೆಯ ಸ್ವಾಧೀನದಲ್ಲಿದ್ದರು ಎಂದರೆ ಸಾಕ್ಷಿ ನಾವೇ ಸ್ವಾಧೀನದಲ್ಲಿದ್ದೇವು ಎಂದು ನುಡಿಯುತ್ತಾರೆ.

6. ನನ್ನ ತಾಯಿಯ ಜೀವಿತಾಕಾಲದಲ್ಲಿ ಹಾಗೂ ನಂತರದಲ್ಲಿ ನಾನು ಕಂದಾಯ ಕಟ್ಟಿರುತ್ತೇನೆ. ಸಾಕ್ಷಿಯು ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರಬಹುದು ಎಂದು ನುಡಿಯುತ್ತಾರೆ. ನಿಪಿ-13 ರಂತೆ ನನ್ನ ತಾಯಿ ಸದರಿ ದಾವಾ ಸ್ವತ್ತಿನ ಸರ್ವೆ ನಂಬರ್ ಜಾಗವನ್ನು ಅಡಮಾನ ಮಾಡಿದ್ದರು ಎಂದರೆ ಸಾಕ್ಷಿಯು ಆಧಾರ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿ ಜೀವಿತಾಕಾಲದಲ್ಲಿ ಸದರಿ ಸರ್ವೆ ನಂಬರ್ ಹಾಗೂ ಉಳಿದ ಸ್ವತ್ತಿನ ಬಗ್ಗೆ ಅಡಮಾನ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

7. ವೀರೇಗೌಡರಿಗೆ ಒಟ್ಟು 10 ಸರ್ವೆ ನಂಬರ್ ಗಳ ಆಸ್ತಿ ಇದ್ದು ಅದರಂತೆ 12 ಎಕರೆ 38 ಮುಕ್ಕಾಲು ಗುಂಟೆ ಜಮೀನಿತ್ತು ಎಂದರೆ ಸರಿ. ಅದರಂತೆ ನನ್ನ ತಾಯಿ ಹೆಸರಿನಲ್ಲಿ ಎಂ ಆರ್ 5/84-85 ರಂತೆ 6 ಎಕರೆ 19 ವರೆ ಗುಂಟೆ ಜಾಗ ಬಂದಿರುತ್ತದೆಂದರೆ ಸಾಕ್ಷಿಯು ನನ್ನ ಅಜ್ಜಿಯನ್ನು ಬಿಟ್ಟು ನನ್ನ ತಾಯಿ ಹಾಗೂ 1ನೇ ಪ್ರತಿವಾದಿ ಇಬ್ಬರೇ ಮಾಡಿಕೊಂಡಿರುತ್ತಾರೆಂದು ನುಡಿಯುತ್ತಾರೆ. ಸದರಿ ಎಂ ಆರ್ 5/84-85 ರಲ್ಲಿ ನನ್ನ ತಾಯಿ ಹೆಸರಿಗೆ ಆಗಿರುವ ಖಾತೆಯ ಬಗ್ಗೆ ತಹಶೀಲ್ದಾರ್ ಅಥವಾ ಎಸಿ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಲಾಗಿದೆಯಾ ಎಂಬ ಸೂಚನೆಗೆ ಸಾಕ್ಷಿಯು ಮಾಡಿರುತ್ತೇನೆಂದು ನುಡಿಯುತ್ತಾರೆ. ಯಾವ ವರ್ಷದಲ್ಲಿ ಪ್ರಶ್ನೆ ಮಾಡಿರುತ್ತೇನೆಂದರೆ ಸಾಕ್ಷಿಯು ಅಗ್ರಿಮೆಂಟ್ ಆದ ಸಮಯದಲ್ಲಿ ಮಾಡಿರುತ್ತೇನೆಂದು ನುಡಿಯುತ್ತಾರೆ. ಸದರಿ ಅಪೀಲಿನಲ್ಲಿ ಯಾರು ಯಾರನ್ನು ಪಕ್ಷಗಾರರಾಗಿ ಮಾಡಿರುತ್ತೇನೆಂದರೆ ನಾನು ಕೇವಲ ಖಾತೆಯಾಗಿರುವುದು ಸರಿ ಇಲ್ಲ ಎಂದು ಹಾಕಿರುತ್ತೇನೆಂದು ನುಡಿಯುತ್ತಾರೆ. ಸದರಿ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿರಬೇಕೆಂದು ಸಾಕ್ಷಿ ನುಡಿಯುತ್ತಾರೆ. ಸಾಕ್ಷಿಯು ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆಂದು ನುಡಿಯುತ್ತಾರೆ. 1ನೇ ಪ್ರತಿವಾದಿಯವರಿಗೆ ಎಂ ಆರ್ 6/84-85 ರಂತೆ ಒಟ್ಟು 6 ಎಕರೆ 19 ಕಾಲು ಗುಂಟೆ ಎಲ್ಲಾ ಸರ್ವೆ ನಂಬರ್ ಗಳಿಂದ ಖಾತೆಯಾಗಿರುತ್ತದೆಂದರೆ ಸಾಕ್ಷಿಯು ಅದು

ಸರಿಯಿಲ್ಲ ಎಂಬುದಾಗಿ ತಹಶೀಲ್ದಾರ್ ಬಳಿ ನಾನು ಅರ್ಜಿ ಮಾಡಿರುತ್ತೇನೆಂದು ನುಡಿಯುತ್ತಾರೆ.

8. ನಿಪಿ-7 ರಂತೆ ಸರ್ವೆ ನಂ.113/1 ರಲ್ಲಿ ಗಜದ ರೂಪದಲ್ಲಿ ಒಟ್ಟು ವಿಸ್ತೀರ್ಣವೂ 1ನೇ ಪ್ರತಿವಾದಿಗೆ ಸೇರಿರುವುದಾಗಿ ನಮೂದಾಗಿರುತ್ತದೆಂದರೆ ಸಾಕ್ಷಿಯು ನಾನು ಅದನ್ನು ಓದಿ ತಿಳಿದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-7 ರಂತೆ 1 ನೇ ಪ್ರತಿವಾದಿಗೆ ಒಟ್ಟು ವಿಸ್ತೀರ್ಣವೂ ಅವರಿಗೆ ಎಂಬುದಾಗಿ ನಮೂದಾಗಿದ್ದರೂ ಸಹಿತ ನನ್ನ ತಾಯಿ ಹಾಗೂ 1ನೇ ಪ್ರತಿವಾದಿಗೆ ಸೇರಿದಂತೆ ಎಂ ಆರ್ ದಾಖಲಾತಿಯಲ್ಲಿ 19ವರೆ ಹಾಗೂ 19ವರೆ ತಲಾ ಎಂದು ಖಾತೆದಾರರಾಗಿ ತೋರಿಸಲಾಗಿದೆ ಎಂದರೆ ಸಾಕ್ಷಿಯು ಅದು ಸರಿಯಿಲ್ಲ ಎಂಬುದಾಗಿ ತಹಶೀಲ್ದಾರ್ ಬಳಿ ನಾನು ಅರ್ಜಿ ಮಾಡಿರುತ್ತೇನೆಂದು ನುಡಿಯುತ್ತಾರೆ. ಈಗಲೂ ಸಹಿತ ಪಹಣಿಯಲ್ಲಿ ಸರ್ವೆನಂ.113/1 ರಲ್ಲಿ 19ವರೆ ಗುಂಟೆ ನನ್ನ ತಾಯಿ ಹೆಸರಿನಲ್ಲಿ ಬರುತ್ತಿದೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ನಾನು ಈ ವಿಷಯಗಳನ್ನು ಉದ್ದೇಶಪೂರ್ವಕವಾಗಿ ದಾವೆಯಲ್ಲಿ ಹಾಗೂ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಸಾಕ್ಷಿಯು ಅವರಿಗೆ ಬಂದ ಸ್ವತ್ತುನ್ನು ಅವರ ಪತ್ರದಲ್ಲಿ ಇರುವಂತೆ ಅವರಿಗೆ ನಮ್ಮ ಪತ್ರದಲ್ಲಿ ಇರುವಂತೆ ನಮಗೆ ಎಂದು ತಿಳಿಸಿರುತ್ತೇನೆಂದು ನುಡಿಯುತ್ತಾರೆ.

9. ನಮಗೆ ಸೇರಿರುವ ಪತ್ರವನ್ನು ಉದ್ದೇಶಪೂರ್ವಕವಾಗಿ ಸಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿಯು ಅದು ನನ್ನ ಬಳಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ದಾವೆಯಲ್ಲಿ ನನ್ನ ತಾಯಿಗೆ ಎಷ್ಟೆಷ್ಟು ಸರ್ವೆ ನಂಬರ್ ಗಳಲ್ಲಿ ಎಷ್ಟು ಬಂದಿರುವುದಾಗಿ ನಮೂದಿಸಲು ಆಡಚಣೆ ಇತ್ತಾ ಎಂದರೆ ಸಾಕ್ಷಿಯು ಆ ಪತ್ರ ಇಲ್ಲದಿರುವ ಕಾರಣ ನೋಡಿ ಬರೆಸಲು ಆಗಿರುವುದಿಲ್ಲ ಆದ್ದರಿಂದ ಅವರ ಪತ್ರದ ಕಾಪಿಯಂತೆ ಬರೆಸಿರುತ್ತೇವೆಂದು ನುಡಿಯುತ್ತಾರೆ. ನಾನು ಹೇಳಿರುವ ವಿಭಾಗಪತ್ರವನ್ನು ಸೃಷ್ಟಿ ಮಾಡಲಾಗಿರುತ್ತದೆಂದರೆ ಸರಿಯಲ್ಲ. ನನ್ನ ತಾಯಿಯು ವ್ಯವಸಾಯ ಸಂಘದಲ್ಲಿ ತನಗೆ ಎಷ್ಟು ಸ್ವತ್ತಿನ ಮೇಲೆ ಹಕ್ಕು ಇದೆಯೋ ಅಷ್ಟಕ್ಕೆ ನೊಂದಣಿ ಮಾಡಿ ಸಾಲ ಪಡೆದಿರುತ್ತಾರೆಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಹಾಜರು ಪಡಿಸಿರುವ ನಿಪಿ-2 ಮತ್ತು 3 ರ ಪಹಣಿಗಳಂತೆ ಖಾತೆಯ ವಿಸ್ತೀರ್ಣದಂತೆ ಪ್ರತಿವಾದಿಯ

ತಾಯಿಯ ಹೆಸರು ಅನುಭವದಾರರ ಕಾಲಂನಲ್ಲಿ ನಮೂದಾಗಿರುತ್ತದೆಂದರೆ ಸದರಿ ಪಹಣಿಗಳನ್ನು ನಾನು ಪ್ರಶ್ನೆ ಮಾಡಿದ್ದೇನೆಂದು ನುಡಿಯುತ್ತಾರೆ. ನಾನು ಸಲ್ಲಿಸಿರುವ ದಾವಾ ಸ್ವತ್ತಿನ ಷೆಡ್ಯೂಲ್ ಗೆ ನಾವು ಹಕ್ಕುದಾರರು ಅಲ್ಲ ಆದರೂ ಸಹಿತ ಸುಳ್ಳು ದಾವೆ ಹಾಕಿರುತ್ತೇವೆಂದರೆ ಸರಿಯಲ್ಲ. ನಾನು ಉದ್ದೇಶಪೂರ್ವಕವಾಗಿ ದಾವೆ ಹಾಗೂ ಮುಖ್ಯ ವಿಚಾರಣೆಯ ಅಂಶಗಳನ್ನು ಸೃಷ್ಟಿ ಮಾಡಿ ಸುಳ್ಳು ದಾವೆ ಹಾಕಿರುತ್ತೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**